# ಆಹಾ ಸುದ್ದಿ!

★ ಸಸಿತೋಟ



ರಸ್ತೆಯಲ್ಲಿ ಕಾರುಗಳ ಹಿಂದೆ ಎರ್ರಾಬಿರ್ರಿಯಾಗಿ ಓಡುತ್ತ ಬೊಗಳುವ ನಾಯಿಗಳಿಗೆ ಕಾರು ಚಾಲನೆ ಎಷ್ಟು ಕಷ್ಟ ಎಂಬುದೇನು ಗೊತ್ತು? ಅದಕ್ಕೇ ಇರಬಹುದು, ನ್ಯೂಜಿಲೆಂಡ್‌ನ ಪ್ರಾಣಿ ದಯಾ ಸಂಸ್ಥೆಯೊಂದು ಬೀದಿ ನಾಯಿಗಳಿಗೇ ಕಾರು ಚಾಲನೆಯ ತರಬೇತಿ ನೀಡುತ್ತಿದೆ. ಕಾರನ್ನು ಚಾಲೂ ಮಾಡಿ, ವೇಗವನ್ನು ಹೆಚ್ಚಿಸಿ, ಸ್ಟೀಯರಿಂಗ್ ಮೇಲಿನ ನಿಯಂತ್ರಣವನ್ನು ಈ ನಾಯಿಗಳು ಸಾಧಿಸಿವೆಯಂತೆ. ಬ್ರೇಕ್ ಹಾಕುವ ಕಲೆಯನ್ನೂ ಇನ್ನೂ ಕಲಿಸಬೇಕಂತೆ. ಆದರೆ ಶ್ವಾನಚಾಲಕರು ಕಾರಿನಲ್ಲಿ ವೇಗವಾಗಿ ಹೋಗುತ್ತಿರುವಾಗ ರಸ್ತೆ ಬದಿಯಲ್ಲಿ ಲೈಟುಕಂಬಗಳು ಕಂಡರೆ... ಬ್ರೇಕ್ ಹಾಕುವ ಕಲೆಯನ್ನು ತನ್ನಿಂದ ತಾನೆ ಕಲಿಯಬಹುದು.

ಡಿ.21ರ ಪ್ರಳಯಕ್ಕೆ ಬ್ರಿಟನ್ ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ಅಲ್ಲಿಯ ಸರ್ಕಾರವೇ ಈ ಬಗ್ಗೆ ನಾಗರಿಕರಿಗೆ ಸಲಹೆ- ಸೂಚನೆಗಳನ್ನು ನೀಡುತ್ತಿದೆ. ಮನೆಯ ಮೇಲೆ ಬೆಂಕಿ ಉಂಡೆಗಳು ಉದುರಿದರೆ, ಕಾರಿಗೆ ಬೆಂಕಿ ಹೊತ್ತಿಕೊಂಡರೆ ಅಧಿಕಾರಿಗಳನ್ನು ಹೇಗೆ ಸಂಪರ್ಕಿಸಬೇಕು; ಅಂದು ಪ್ರಯಾಣ ಮಾಡಬೇಕೆ ಅಥವಾ ಬೇಡವೆ ಎಂಬುದರ ಬಗ್ಗೆ ಎಚ್ಚರಿಕೆ ನೀಡುತ್ತಿದೆಯಂತೆ. ಜೊತೆಗೆ ಸ್ಥಳೀಯ ರೇಡಿಯೊ ಕೂಡಾ ಆಗಾಗ ಹವಾಮಾನ ಮುನ್ಸೂಚನೆ ನೀಡುತ್ತದೆ. ಬ್ರಿಟನ್ನಿನಲ್ಲಿ ಪ್ರಳಯವೆಂದರೆ ರಕ್ಷಣಾ ತಂಡಗಳನ್ನು ಬಿಟ್ಟು, ಉಳಿದವರ ಮೇಲೆ ನಿಧಾನವಾಗಿ ಪರಿಣಾಮ ಬೀರುವಂಥದ್ದು ಎಂದಂತಾಯ್ತು.

ಬಟ್ಟೆ ಕೊಡಿ ಎಂದು ಬಡವರು ಬೇಡಿದರೆ, ಸ್ಯಾನ್‌ಫ್ರಾನ್ಸಿಸ್ಕೋದ ಮಂದಿ ಉಟ್ಟ ಬಟ್ಟೆ ಬಿಚ್ಚಿ ಎಸೆದು ಓಡಾಡಲು ಬಿಡಿ ಎಂದು ಬೊಬ್ಬಿಡುತ್ತಿದ್ದಾರಂತೆ. ಅಮೆರಿಕಾದ ಈ ನಗರದಲ್ಲಿ ನಗ್ನತೆಗೆ ನಿಷೇಧ ವಿಧಿಸಲಾಗಿದೆ. ಸದ್ಯಕ್ಕಂತೂ ಪೊಲೀಸರಿಗೆ ಕೈತುಂಬ ಕೆಲಸ. ಕೈಯಲ್ಲಿ ಬೆಡ್‌ಶೀಟ್ ಹಿಡಿದು ಬಟ್ಟೆ ಬಿಚ್ಚಿ ಎಸೆಯುವವ ಹಿಂದೆ ತಿರುಗಬೇಕಾದ ಹೆಚ್ಚುವರಿ ಕೆಲಸ ವಹಿಸಲಾಗಿದೆಯಂತೆ.



ಪುರುಷನ ಮುಖ ನೋಡಿಯೇ ಆತ ಪ್ರೇಮಿಸಲು ಅರ್ಹನೋ ಅಥವಾ ಅನರ್ಹನೋ ಎಂದು ಹೇಳುವ ತಾಕತ್ತು ಮಹಿಳೆಗಿದೆಯಂತೆ. ಹೀಗಂತ ಹಾಂಕಾಂಗ್‌ನ ಬಯಾಲಜಿ ಲೆಟರ್ಸ್ ಜರ್ನಲ್‌ನಲ್ಲಿ ಲವಾಲಜಿ ಬಗ್ಗೆ ಪ್ರಕಟವಾಗಿದೆ. ಆತನ ಮುಖದಲ್ಲಿ ಪುರುಷತ್ವದ ಲಕ್ಷಣಗಳು ಹೆಚ್ಚು ಗೋಚರಿಸಿದರೆ ಆತನ 'ಚುಪ್ಕೆ ಚುಪ್ಕೆ ಪ್ಯಾರ್'ನ ಪ್ರಕರಣಗಳ ಸಂಖ್ಯೆಯೂ ಹೆಚ್ಚಂತೆ. ಇಂತಹ ಅಪೂರ್ವ ತಾಕತ್ತು ಇಟ್ಟುಕೊಂಡರೂ ಬಹಳಷ್ಟು ಮಹಿಳೆಯರು ಪ್ರೇಮದ ಅಡ್ಡೆಯನ್ನು ದಾಟುವಾಗ ಎಡವಿ ಬೀಳುತ್ತಾರಲ್ಲಾ ಯಾಕೆ? ಬಹುಶಃ ಅಂತಹ ಮಹಿಳೆಯರು ಪ್ರೇಮಿಸುವಾಗ ಪುರುಷನ ಮುಖಾರವಿಂದ ನೋಡಿರಲಿಕ್ಕಿಲ್ಲ.



ರಸ್ತೆಯನ್ನೇ ನುಂಗಿ ಹಾಕಿ ಕಟ್ಟಡ ಕಟ್ಟುವ ಭೂಪರು, ಇಲ್ಲದ ಆಸ್ತಿಗೆ ಪರಿಹಾರ ಗಿಟ್ಟಿಸಿಕೊಳ್ಳುವ ಜಾಣರು ನಮ್ಮಲ್ಲಿದ್ದಾರೆ. ಆದರೆ ಚೀನಾದ ಲುವೊ ಬಾವೊಜೆನ್ ಹೊಸ ಹೆದ್ದಾರಿಗೆ ಜಾಗವನ್ನೂ ಬಿಡೆ, ನೀವು ನೀಡುವ ಪರಿಹಾರವೂ ಬೇಡ ಎಂದು ಪಟ್ಟು ಹಿಡಿದಾಗ ಚೀನಿ ಸರ್ಕಾರ ಆತನ ಮನೆಯ ಸುತ್ತ ಹೆದ್ದಾರಿ ನಿರ್ಮಿಸಬೇಕಾಯಿತು. ಈ ಚಿತ್ರ ಅಂತರ್ಜಾಲದಲ್ಲಿ ಜನಪ್ರಿಯವೂ ಆಯಿತು. ಕೊನೆಗೂ ಕಟ್ಟಡ ಉರುಳಿಸಲು ಲುವೊ ಒಪ್ಪಿಕೊಂಡಿದ್ದು ಯಾಕೆ ಗೊತ್ತೇ? ಮಾಧ್ಯಮದವರ ದಂಡು ದಂಡೇ ಬಂದು ಮನೆ ಮುಂದೆ ಝೂಂಡಾ ಹಾಕಿ ಕೂರುತ್ತಿತ್ತಂತೆ!



ಕೊಲಂಬಿಯಾದ ಮಾಜಿ ಮಾದಕ ವಸ್ತು ವ್ಯಸನಿ ಮಿಗ್ವೆಲ್‌ಗೆ 22 ವರ್ಷಗಳ ಹಿಂದೆ ತಲೆಯ ಮೇಲೊಂದು ಸೂರು ಬೇಕಿತ್ತು. ಮತ್ತೇಕೆ ತಡ ಮಾಡುವುದು ಎಂದು ಹಳೆಯ ಒಳ ಚರಂಡಿಯನ್ನೇ ಅರಮನೆಯನ್ನಾಗಿ ಮಾಡಿಕೊಂಡು ಆರಾಮವಾಗಿದ್ದಾನೆ. ಮನೆ ಎಂದ ಮೇಲೆ ಅಗತ್ಯ ವಸ್ತುಗಳು ಬೇಡವೇ? ಸ್ಟವ್, ಫ್ಯಾನ್, ಟಿವಿ, ಹಾಸಿಗೆ... ಹೆಂಡತಿ, ನಾಯಿ ಎಂದೆಲ್ಲ ಕಲೆ ಹಾಕಿಕೊಂಡಿದ್ದಾನೆ 3X2 ಮೀಟರ್ ಜಾಗದಲ್ಲಿ. ಮಳೆ ಬಂದರೆ ಮ್ಯಾನ್‌ಹೋಲ್ ಕವರ್‌ನಿಂದ ಬಂದ್ ಮಾಡಿದರಾಯ್ತು. ನೆಂಟರು ಬಂದರೆ ಪಾರ್ಟಿ ಮಾಡುವುದಕ್ಕೂ ಛತ್ರವಿದೆ. ಬಾಡಿಗೆ ಇಲ್ಲದ ಬ್ರಾಡ್ ರಸ್ತೆ!